ಆಹಾ ಸುದ್ದಿ!

★ ಸಸಿತೋಟ



ಭಾರತದ ವಿಸ್ಪಿ ಜಿಮ್ಮಿ ಖರಾಡ್ ಹಾಗೂ ಬಾಜಿ ಕಸದ್ ಹೊಟ್ಟೆಯ ಮೇಲೆ ಅತ್ಯಂತ ಹೆಚ್ಚಿನ ಸಂಖ್ಯೆಯ ಕಲ್ಲಂಗಡಿ ಹಣ್ಣುಗಳನ್ನು ಕತ್ತರಿಸಿ ಗಿನ್ನೆಸ್ ದಾಖಲೆ ಮಾಡಿದರಂತೆ. ಒಂದು ನಿಮಿಷದಲ್ಲಿ ಮಚ್ಚಿನಿಂದ ಹೊಟ್ಟೆಯನ್ನು ಕತ್ತರಿಸದೇ 49 ಕಲ್ಲಂಗಡಿ ಹಣ್ಣುಗಳನ್ನು ಕತ್ತರಿಸಿ ದಾಖಲೆ ಮಾಡಿದ್ದು ನೋಡಿ ಬೆಂಗಳೂರಿನ ರೌಡಿಗಳು ಮುಸಿ ಮುಸಿ ನಕ್ಕಿರಬಹುದು.

ಪಾಕಿಸ್ತಾನದ ಸ್ಥಳೀಯ ಟಿವಿ ಚಾನೆಲ್‌ನ ವರದಿಗಾರ ಹನಾನ್ ಬುಖಾರಿ ತನ್ನ ಮದುವೆ ದಿನವೂ ಕರ್ತವ್ಯ ನಿರ್ವಹಿಸಿ ದಾಖಲೆ ಮಾಡಿದನಂತೆ. ತನ್ನ ಮದುವೆಯ ಪ್ರತಿ ಕ್ಷಣದ ವರದಿಯನ್ನು ಆತ ನೀಡಿದ್ದು, ವಧುವಿನ, ಬಂಧು–ಮಿತ್ರರ ಸಂದರ್ಶನವನ್ನೂ ನಡೆಸಿದನಂತೆ. ಇದಪ್ಪ, ಕರ್ತವ್ಯದ ಮೇಲಿನ ನಿಷ್ಠೆಯೆಂದರೆ..!





ಮದುವೆಯೆಂದರೇ ಕೆಲವು ಸಮುದಾಯಗಳಲ್ಲಿ ಕೇಕ್, ವಜ್ರಗಳ ಸಂಭ್ರಮ. ದುಬೈನಲ್ಲಿ ಇತ್ತೀಚೆಗೆ ನಡೆದ ದುಬೈ ವಧು ಎಂಬ ಪ್ರದರ್ಶನದಲ್ಲಿ ಚಾಕೊಲೇಟ್ ಮತ್ತು ವಜ್ರ ಬಳಸಿ ಈ ಕೇಕ್ ತಯಾರಿಸಿದ್ದು, ಇದರ ಬೆಲೆಯೇ ಹತ್ತು ಲಕ್ಷ ಡಾಲರ್ ಅಂತೆ. ದುಬಾರಿ ಕೇಕ್ ಎನ್ನಬೇಕೋ, ತಿನ್ನುವ ವಜ್ರ ಎನ್ನಬೇಕೋ!



ದಕ್ಷಿಣ ಕೊರಿಯಾದಲ್ಲಿ ಚಳಿಗಾಲದ ಒಲಿಂಪಿಕ್ಸ್‌ಗೆ ಕ್ರೀಡಾಪಟುಗಳು ಸೇರುತ್ತಿದ್ದರೆ, ಅಲ್ಲಿ ಮೇಲಣ ಆಕಾಶದಲ್ಲಿ ರಷ್ಯಾ ಹಾಗೂ ಅಮೆರಿಕಾದ ಗಗನಯಾನಿಗಳು ಬ್ಯಾಡ್ಮಿಂಟನ್ ಡಬಲ್ಸ್ ಪಂದ್ಯವಾಡಿದರಂತೆ. ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಈ ಪಂದ್ಯ ನಡೆದಿದ್ದು, ಶೂನ್ಯ ಗುರುತ್ವಾಕರ್ಷಣದಲ್ಲಿ ಬಾಲ್‌ಗೋ, ಷಟಲ್‌ಗೆ ಹೊಡೆತ ಕೊಡುವ ಅವಶ್ಯಕತೆಯೂ ಇಲ್ಲ, ಅದೂ ಒಂದು ದಾಖಲೆಯೇ!

ಚೀನಾದಲ್ಲಿ ಸಮಾರಂಭವೊಂದರಲ್ಲಿ ತಮ್ಮ ಸಿರಿವಂತಿಕೆ ಮೆರೆಸಲು ಹೋದ ಇಬ್ಬರು ಅತಿಥಿಗಳು ಈಗ ಪೊಲೀಸರ ಅತಿಥಿಯಾಗಿದ್ದಾರಂತೆ. ನಡೆದಿದ್ದು ಇಷ್ಟೇ, ತಮ್ಮ ಶ್ರೀಮಂತಿಕೆ ಮೆರೆಸಲು ಪೈಪೋಟಿಗೆ ಇಳಿದ ಇಬ್ಬರು ಚೀನಾದ ಕರೆನ್ಸಿ ಯುವಾನ್ ಅನ್ನು ಸುಡಲು ಆರಂಭಿಸಿದರಂತೆ. ಇಬ್ಬರೂ ತಲಾ 1000 ಯುವಾನ್ (ಅಂದಾಜು 10 ಸಾವಿರ ರೂಪಾಯಿ) ನೋಟುಗಳನ್ನು ಸುಟ್ಟ ನಂತರ ವಿಡಿಯೋ ವೈರಲ್ ಆಗಿ ಪೊಲೀಸರ ಆಗಮನವಾಯ್ತಂತೆ. ನೋಟನ್ನು ವಿರೂಪಗೊಳಿಸುವುದು ಅಲ್ಲಿ ಅಪರಾಧ.





ಸ್ಪೇನಿನಲ್ಲಿ ಪೊಲೀಸರು ವಶಪಡಿಸಿಕೊಂಡ ಕಾರಿನಲ್ಲಿ ಕೇವಲ ಕಿತ್ತಳೆ ಹಣ್ಣುಗಳೇ ತುಂಬಿದ್ದವಂತೆ, ಅದೂ ಕದ್ದ ಹಣ್ಣುಗಳು. ವೇಗವಾಗಿ ಹೋಗುತ್ತಿದ್ದ ಕಾರಿನ ಬಗ್ಗೆ ಅನುಮಾನಗೊಂಡು ಬೆನ್ನಟ್ಟಿದ ಪೊಲೀಸರು ಮಣ್ಣಿನ ಕೆಟ್ಟ ರಸ್ತೆಯಲ್ಲಿ ಸಾಗಿ ಕಷ್ಟಪಟ್ಟು ಹಿಡಿದರೆ ಓಡಿಹೋದ ಕಳ್ಳರ ಬದಲು ಸಿಕ್ಕಿದ್ದು ಈ ಹಣ್ಣುಗಳು. ಚಳ್ಳೆಹಣ್ಣು ತಿನ್ನಿಸುವ ಬದಲು ಕಳ್ಳರು ಕಿತ್ತಳೆಹಣ್ಣು ತಿನ್ನಿಸಿದ್ದರು.